# All India Radio: Bangalore
# National Bulletins In Kannada
# 05.07.2025 / 19.35 hrs

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><*<><>*><>**

ಮುಖ್ಯಾಂಶಗಳು

೧. ಬ್ರೆಜಿಲ್‌ನಲ್ಲಿ ನಾಳೆ ನಡೆಯಲಿರುವ ಬ್ರಿಕ್ಸ್ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗಿ

೨. ಕೈಗಾರಿಕೋದ್ಯಮಿಗಳೊಂದಿಗೆ ಕೇಂದ್ರ ಸಚಿವ ಪಿಯೂಷ್ ಗೋಯಲ್ ಸಂವಾದ

೩. ಆರ್ಥಿಕ ಅಪರಾಧಿ ನೀರವ್ ಮೋದಿ ಸಹೋದರ ನೇಹಲ್ ಮೋದಿ ಅಮೆರಿಕದಲ್ಲಿ ಬಂಧನ

೪. ಪ್ಯಾರಾ ಆರ್ಚರಿ ಏಷ್ಯನ್ ಚಾಂಪಿಯನ್‌ಶಿಪ್; ಭಾರತಕ್ಕೆ ಎರಡು ಚಿನ್ನ

**<><*<><>*><>**

ತಮ್ಮ ಐದು ರಾಷ್ಟ್ರಗಳ ಭೇಟಿಯ ಮೂರನೇ ಚರಣದ ಭಾಗವಾಗಿ ಪ್ರಧಾನಿ ನರೇಂದ್ರ ಮೋದಿ ಇಂದು ಅರ್ಜೆಂಟೀನಾದ ರಾಜಧಾನಿ ಬ್ಯುನೋಸ್ ಏರ್ಸ್‌ಗೆ ತಲುಪಿದ್ದಾರೆ. ಅವರಿಗೆ ಅಲ್ಲಿನ ಭಾರತೀಯ ಸಮುದಾಯದವರು ವಿಶೇಷ ಶಾಸ್ತ್ರೀಯ ನೃತ್ಯ ಪ್ರದರ್ಶನದ ಮೂಲಕ ಆತ್ಮೀಯ ಸ್ವಾಗತ ಕೋರಿದರು. ಈ ಭೇಟಿ ಜಾಗತಿಕ ದಕ್ಷಿಣದೊಂದಿಗೆ ಭಾರತದ ನಿಕಟ ಸಂಪರ್ಕವನ್ನು ಮತ್ತಷ್ಟು ಬಲಪಡಿಸುವ ಉದ್ದೇಶ ಹೊಂದಿದೆ. ಇಂದು ಸಂಜೆ ಅವರು ಅರ್ಜೆಂಟೀನಾದ ಖ್ಯಾತ ಸ್ವಾತಂತ್ರ್ಯ ಹೋರಾಟಗಾರ ಹಾಗೂ ರಾಷ್ಟ್ರೀಯ ನಾಯಕ ಜನರಲ್ ಜಾಸ್ ಡಿ ಸಾನ್ ಮಾರ್ಟಿನ್ ಅವರಿಗೆ ಗೌರವ ನಮನ ಸಲ್ಲಿಸಲಿದ್ದಾರೆ. ಬಳಿಕ ಪ್ರಧಾನಿ ಅವರಿಗೆ ಸಾಂಪ್ರದಾಯಿಕ ಸ್ವಾಗತ ಕೋರಲಾಗುವುದು. ಪ್ರಧಾನಿ ನರೇಂದ್ರ ಮೋದಿ, ಅರ್ಜೆಂಟೀನಾ ಅಧ್ಯಕ್ಷ ಜೇವಿಯರ್ ಮಿಲಿ ಅವರೊಂದಿಗೆ ನಿಯೋಗಮಟ್ಟದ ಮಾತುಕತೆ ನಡೆಸಲಿದ್ದಾರೆ. ಈ ಭೇಟಿ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಸದೃಢಗೊಳಿಸುವ ಜೊತೆಗೆ ಸಹಕಾರಕ್ಕಾಗಿ ವಿವಿಧ ಮಾರ್ಗಗಳನ್ನು ತೆರೆಯಲಿದೆ. ಈ ನಿಟ್ಟಿನಲ್ಲಿ ವ್ಯಾಪಾರ ಮತ್ತು ಹೂಡಿಕೆ, ಆರೋಗ್ಯ ಮತ್ತು ಔಷಧ, ರಕ್ಷಣೆ ಮತ್ತು ಭದ್ರತೆ, ಮೂಲಸೌಕರ್ಯ, ಗಣಿಗಾರಿಕೆ ಮತ್ತು ಖನಿಜ ಸಂಪನ್ಮೂಲ, ಕೃಷಿ ಹಸಿರು ಇಂಧನ, ಡಿಜಿಟಲ್ ನಾವಿನ್ಯತೆ, ತಂತ್ರಜ್ಞಾನ, ವಿಪತ್ತು ನಿರ್ವಹಣೆ, ಶಿಕ್ಷಣ ಸೇರಿದಂತೆ ಬಹು ಆಯಾಮದ ವಿವಿಧ ಕ್ಷೇತ್ರಗಳಲ್ಲಿ ಸಹಕಾರ ಬಲವರ್ಧನೆಗೆ ಒತ್ತು ನೀಡಲಾಗುವುದು.  ಪ್ರಧಾನಿ ನರೇಂದ್ರ ಮೋದಿ ಹಾಗೂ ಅರ್ಜೆಂಟೀನಾ ಅಧ್ಯಕ್ಷ ಜೇವಿಯರ್ ಮಿಲಿ, ನಡುವಿನ ಸಭೆ ಕಳೆದ ವರ್ಷ ರಿಯೋ ಡಿ ಜನೈರೋದಲ್ಲಿ ನಡೆದ ಜಿ-೨೦ ಶೃಂಗಸಭೆ ನೇಪಥ್ಯದಲ್ಲಿ ನಡೆದಿತ್ತು.  ಈ ಬಾರಿ ಕೈಗೊಂಡಿರುವ ಪ್ರವಾಸ ೫೭ ವರ್ಷಗಳ ನಂತರ ಭಾರತೀಯ ಪ್ರಧಾನಮಂತ್ರಿಯೊಬ್ಬರು ಕೈಗೊಂಡಿರುವ ಮೊದಲ ದ್ವಿಪಕ್ಷೀಯ ಭೇಟಿ ಇದಾಗಿದೆ.

**<><*<><>*><>**

ನಾಳೆ ಮತ್ತು ನಾಡಿದ್ದು, ಬ್ರೆಜಿಲ್‌ನ ರಿಯೊ ಡಿ ಜನೈರೋದಲ್ಲಿ ನಡೆಯಲಿರುವ ಬ್ರಿಕ್ಸ್ ಶೃಂಗಸಭೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಪಾಲ್ಗೊಳ್ಳಲಿದ್ದಾರೆ. ಈ ವೇಳೆ ಪ್ರಧಾನಿ, ಬ್ರಿಕ್ಸ್ ಶೃಂಗದ ಹತ್ತು ಇತರೆ ರಾಷ್ಟ್ರಗಳ ನಾಯಕರೊಂದಿಗೆ ವೇದಿಕೆ ಹಂಚಿಕೊಳ್ಳಲಿದ್ದಾರೆ. ಬ್ರಿಕ್ಸ್, ಜಾಗತಿಕ ಜಿಡಿಪಿಯ ಶೇಕಡ ೨೯ ರಷ್ಟು ಹಾಗೂ ಜಾಗತಿಕ ವ್ಯಾಪಾರದ ಶೇಕಡ ೨೩ ರಷ್ಟು ಪಾಲನ್ನು ಪ್ರತಿನಿಧಿಸುತ್ತದೆ. ನೇರ ವಿದೇಶಿ ಬಂಡವಾಳದ ಶೇಕಡ ೨೪ ರಷ್ಟನ್ನು ಮತ್ತು ಜಾಗತಿಕ ತೈಲ

ಉತ್ಪಾದನೆಯ ಶೇಕಡ ೪೩ ರಷ್ಟನ್ನು ಬ್ರಿಕ್ಸ್ ಕೊಡುಗೆ ನೀಡುತ್ತದೆ.  ಬ್ರೆಜಿಲ್ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಈ ಬಾರಿಯ ಬ್ರಿಕ್ಸ್ ಶೃಂಗಸಭೆ, ಜಾಗತಿಕ ಆರೋಗ್ಯ, ವ್ಯಾಪಾರ, ಹೂಡಿಕೆ ಮತ್ತು ಹಣಕಾಸು, ಹವಾಮಾನ ಬದಲಾವಣೆ, ಕೃತಕ ಬುದ್ಧಿಮತ್ತೆ ನಿರ್ವಹಣೆ, ಬಹು ಆಯಾಮದ ಶಾಂತಿ ಮತ್ತು ಭದ್ರತಾ ಮೂಲಸೌಕರ್ಯ ಹಾಗೂ ಸಾಂಸ್ಥಿಕ ಅಭಿವೃದ್ಧಿ ಸೇರಿದಂತೆ ಒಟ್ಟು ೬ ಆದ್ಯತಾ ಕ್ಷೇತ್ರಗಳಾಗಿ ಪರಿಗಣಿಸಲಾಗಿದೆ.  ಬ್ರಿಕ್ಸ್ ಶೃಂಗಸಭೆ ನಂತರ ಪ್ರಧಾನಿ ನರೇಂದ್ರ ಮೋದಿ ಅವರ ಬ್ರೆಝಿಲ್ ಭೇಟಿ ಮಹತ್ವದ್ದಾಗಿದೆ. ಈ ವೇಳೆ ಅವರು, ಅಧ್ಯಕ್ಷ ಲೂಯಿಜ್ ಇನಾಸಿಯೋ ಲುಲಾ ಡಿಸಿಲ್ವ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಿ, ಹಲವು ಒಪ್ಪಂದಗಳಿಗೆ ಸಹಿ ಹಾಕುವ ನಿರೀಕ್ಷೆಯಿದೆ. ಆರು ದಶಕಗಳಲ್ಲೇ, ಭಾರತದ ಪ್ರಧಾನಿಯೊಬ್ಬರು ಇದೇ ಮೊದಲ ಬಾರಿಗೆ ಬ್ರೆಜಿಲ್‌ಗೆ ಭೇಟಿ ನೀಡುತ್ತಿದ್ದಾರೆ.

**<><*<><>*><>**

೨೦೪೭ ರ ವೇಳೆಗೆ ದೇಶವನ್ನು ನಾಲ್ಕು ಟ್ರಿಲಿಯನ್ ಡಾಲರ್ ಆರ್ಥಿಕತೆಯಿಂದ ೩೨ ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಿ ಪರಿವರ್ತಿಸಲು ಭಾರತದ ನೀತಿಗಳು ಕಾರ್ಯತಂತ್ರದ ರಚನೆಯನ್ನು ಹೊಂದಿವೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ. ಬೆಂಗಳೂರಿನಲ್ಲಿಂದು ನಡೆದ ಐಐಟಿ ಮದ್ರಾಸ್‌ನ 'ಸಂಗಮ್ ೨೦೨೫' ಜಾಗತಿಕ ನಾವೀನ್ಯತೆ ಮತ್ತು ಹಳೆಯ ವಿದ್ಯಾರ್ಥಿಗಳ ಶೃಂಗಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಸರ್ಕಾರದ ಭವಿಷ್ಯದ ನೀತಿಗಳು ಭಾರತವನ್ನು ಈಗಾಗಲೇ ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆಯಾಗಿಸಿವೆ. ೨೦೨೮ ರ ವೇಳೆಗೆ ದೇಶವು ಮೂರನೇ ಅತಿದೊಡ್ಡ ಆರ್ಥಿಕತೆಯಾಗಲು ಸಜ್ಜಾಗಿದೆ ಎಂದು ಅವರು ಹೇಳಿದರು. ಭಾರತವು, ಪ್ರಸ್ತುತ ಜಾಗತಿಕವಾಗಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಗಳಲ್ಲಿ ಒಂದಾಗಿದೆ. ಸರ್ಕಾರದ ನೀತಿಗಳು ಮತ್ತು ಕಾರ್ಯಕ್ರಮಗಳು ಭವಿಷ್ಯಕ್ಕೆ ಸಿದ್ಧವಾಗಿರುವ ಭಾರತವನ್ನು ರೂಪಿಸುತ್ತಿವೆ ಎಂದರು. ಹಿಂದಿನ ಬಜೆಟ್‌ನಲ್ಲಿ ಆಳವಾದ ತಂತ್ರಜ್ಞಾನ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ೧೦ ಸಾವಿರ ಕೋಟಿ ರೂಪಾಯಿ ನಿಗದಿಪಡಿಸಲಾಗಿದೆ. ನಾವೀನ್ಯತೆ ಮತ್ತು ಉದಯೋನ್ಮುಖ ತಂತ್ರಜ್ಞಾನಗಳನ್ನು ಮತ್ತಷ್ಟು ಬೆಂಬಲಿಸುವ ನಿಟ್ಟಿನಲ್ಲಿ ಪ್ರಸ್ತುತ ಹೆಚ್ಚುವರಿಯಾಗಿ ೧೦ ಸಾವಿರ ಕೋಟಿ ರೂಪಾಯಿ ಮಂಜೂರು ಮಾಡಲಾಗಿದೆ ಎಂದು ಸಚಿವರು ತಿಳಿಸಿದರು.

ದ್ವನಿ: ಪಿಯೂಷ್ ಗೋಯಲ್ ( ೨೪ ಸೆಕೆಂಡ್ಸ್)

ಕಳೆದ ಕೇಂದ್ರ ಸಚಿವ ಸಂಪುಟ ಸಭೆಯು, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಒಂದು ಲಕ್ಷ ಕೋಟಿ ರೂಪಾಯಿಗಳನ್ನು ಅನುಮೋದಿಸಿದೆ. ತಾಂತ್ರಿಕ ನಾವೀನ್ಯತೆಯನ್ನು ಹೆಚ್ಚಿಸಲು ಇದನ್ನು ೫೦ ವರ್ಷಗಳಲ್ಲಿ ಶೂನ್ಯ ಬಡ್ಡಿ ದರದಲ್ಲಿ ಸಾಲವಾಗಿ ನೀಡಲಾಗುವುದು ಎಂದು ಸಚಿವ ಪಿಯೂಷ್ ಗೋಯಲ್ ಹೇಳಿದರು. ನಂತರ ಅವರು, ಕೈಗಾರಿಕೋದ್ಯಮಿಗಳೊಂದಿಗೆ ಸಂವಾದ ನಡೆಸಿದರು. ಬಳಿಕ ದೇವನಹಳ್ಳಿಯಲ್ಲಿ ಏರೋಸ್ಪೇಸ್ ವಿಶೇಷ ಆರ್ಥಿಕ ವಲಯಕ್ಕೆ ಭೇಟಿ ನೀಡಿ, ಅಲ್ಲಿನ ಸಿಬ್ಬಂದಿಯೊಂದಿಗೆ ಸಂವಾದ ನಡೆಸಿದರು.

**<><*<><>*><>**

ನಾವೀನ್ಯತೆ ವೈದ್ಯಕೀಯ ವೇದಿಕೆಯ ೬ನೇ ವಾರ್ಷಿಕ ಅಂತಾರಾಷ್ಟ್ರೀಯ ಸಮ್ಮೇಳನವನ್ನು ನವದೆಹಲಿಯಲ್ಲಿಂದು ಆಯೋಜಿಸಲಾಗಿದೆ.  ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಲೋಕಸಭಾಧ್ಯಕ್ಷ ಓಂ ಬಿರ್ಲಾ, ವೈದ್ಯಕೀಯ ಶಿಕ್ಷಣ, ಸಂಶೋಧನೆ ಮತ್ತು ಜಾಗತಿಕ ಸಹಕಾರದ ಕುರಿತು ಪ್ರಸ್ತಾಪಿಸಿದರು. ಅಲ್ಲದೇ ಉದಯೋನ್ಮುಖ ಭಾರತದ ಆರೋಗ್ಯ ನೀತಿಯನ್ನು ವಿವರಿಸಿದರು. ಭಾರತ, ನೇಪಾಳ, ಶ್ರೀಲಂಕಾ, ಮಲೇಷಿಯಾ ಮತ್ತು ಬ್ರಿಟನ್‌ನಿಂದ  ವೈದ್ಯರು ಮತ್ತು ಸಂಶೋಧಕರು ಈ

ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ. ಸಮ್ಮೇಳನದ ಉದ್ದೇಶ ಆಂತರಿಕ ವೈದ್ಯಕೀಯದ ಭವಿಷ್ಯವನ್ನು ಚರ್ಚಿಸುವುದಾಗಿದೆ. ಇದು ವೈದ್ಯಕೀಯ, ಶಿಕ್ಷಣ ಮತ್ತು ಸಂಶೋಧನೆ ಕ್ಷೇತ್ರಗಳಲ್ಲಿ ಅಂತಾರಾಷ್ಟ್ರೀಯ ಸಹಕಾರಕ್ಕೆ ಹೊಸ ಆಯಾಮ ನೀಡಲಿದೆ.

**<><*<><>*><>**

ಪರಾರಿಯಾದ ಆರ್ಥಿಕ ಅಪರಾಧಿ ನೀರವ್ ಮೋದಿಯ ಸಹೋದರ ನೇಹಾಲ್ ಮೋದಿಯನ್ನು ಅಮೆರಿಕದ ಅಧಿಕಾರಿಗಳು ಇಂದು ಬಂಧಿಸಿದ್ದಾರೆ ಎಂದು ಅಮೆರಿಕದ ನ್ಯಾಯಾಂಗ ಇಲಾಖೆ ತಿಳಿಸಿದೆ. ಜಾರಿ ನಿರ್ದೇಶನಾಲಯ ಮತ್ತು ಕೇಂದ್ರ ತನಿಖಾ ದಳ ಜಂಟಿಯಾಗಿ ಸಲ್ಲಿಸಿದ ಹಸ್ತಾಂತರ ವಿನಂತಿಯ ಮೇರೆಗೆ ಈ ಬಂಧನ ಮಾಡಲಾಗಿದೆ. ಅಮೆರಿಕದ ಪ್ರಾಸಿಕ್ಯೂಷನ್ ಸಲ್ಲಿಸಿದ ದೂರಿನ ಪ್ರಕಾರ, ಎರಡು ಆರೋಪಗಳ ಮೇಲೆ ಹಸ್ತಾಂತರ ಪ್ರಕ್ರಿಯೆಗಳನ್ನು ಮುಂದುವರಿಸಲಾಗುತ್ತಿದೆ. ದೇಶದ ಇತಿಹಾಸದಲ್ಲಿ ಅತಿದೊಡ್ಡ ಬ್ಯಾಂಕಿಂಗ್ ಹಗರಣಗಳಲ್ಲಿ ಒಂದಾದ ಪಂಜಾಬ್ ನ್ಯಾಷನಲ್ ಬ್ಯಾಂಕ್ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ನೇಹಾಲ್ ಮೋದಿ ಭಾರತಕ್ಕೆ ಬೇಕಾಗಿದ್ದಾರೆ. ನೀರವ್ ಮೋದಿ ಪರವಾಗಿ ಆದಾಯವನ್ನು ಅಕ್ರಮವಾಗಿ ವರ್ಗಾಯಿಸುವಲ್ಲಿ ನೇಹಾಲ್ ಮೋದಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಇಡಿ ಮತ್ತು ಸಿಬಿಐ ನಡೆಸಿದ ತನಿಖೆಗಳು ಬಹಿರಂಗಪಡಿಸಿವೆ. ಶೆಲ್ ಕಂಪನಿಗಳು ಮತ್ತು ವಿದೇಶಿ ವಹಿವಾಟುಗಳ ಜಾಲದ ಮೂಲಕ ದೊಡ್ಡ ಮೊತ್ತದ ಅಕ್ರಮ ಹಣವನ್ನು ಮರೆಮಾಚಲು ಮತ್ತು ವರ್ಗಾಯಿಸಲು ಅವರು ಸಹಾಯ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಹಸ್ತಾಂತರ ಪ್ರಕ್ರಿಯೆಯ ಮುಂದಿನ ವಿಚಾರಣೆಯ ದಿನಾಂಕ ಜುಲೈ ೧೭ ರಂದು ನಿಗದಿಯಾಗಿದ್ದು, ಈ ವಿಚಾರಣೆಯ ಸಮಯದಲ್ಲಿ ನೆಹಾಲ್ ಮೋದಿ ಜಾಮೀನಿಗಾಗಿ ಅರ್ಜಿ ಸಲ್ಲಿಸುವ ಸಾಧ್ಯತೆ ಇದೆ. ಆದರೆ ಅಮೆರಿಕದ ಪ್ರಾಸಿಕ್ಯೂಷನ್ ಇದನ್ನು ವಿರೋಧಿಸುವುದಾಗಿ ಹೇಳಿದೆ.

**<><*<><>*><>**

ಗ್ರಾಹಕ ವ್ಯವಹಾರಗಳ ಇಲಾಖೆ ಮತ್ತು ಭಾರತೀಯ ಮಾನದಂಡಗಳ ಬ್ಯೂರೋ-ಬಿಐಎಸ್, ದೇಶಾದ್ಯಂತ ಬಿಐಎಸ್ ಪ್ರಮಾಣೀಕರಣಗೊಂಡ ಹೆಲ್ಮೆಟ್‌ಗಳನ್ನೇ ಬಳಸುವಂತೆ ನಾಗರಿಕರಿಗೆ ಮನವಿ ಮಾಡಿದೆ. 'ಬಿಐಎಸ್' ಪ್ರಮಾಣೀಕರಣವಿಲ್ಲದ ಹೆಲ್ಮೆಟ್‌ಗಳ ತಯಾರಿಕೆ ಅಥವಾ ಮಾರಾಟದ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದಾಗಿ ಇಲಾಖೆ ತಿಳಿಸಿದೆ. ಕಳೆದ ಹಣಕಾಸು ವರ್ಷದಲ್ಲಿ ಬಿಐಎಸ್ ಪ್ರಮಾಣಿತ ಗುರುತು ದುರುಪಯೋಗಕ್ಕಾಗಿ, ಬಿಐಎಸ್, ೩೦ ಕ್ಕೂ ಹೆಚ್ಚು ಕಾರ್ಯಾಚರಣೆ ನಡೆಸಿದ್ದು, ಕಾನೂನು ರೀತಿ ಕ್ರಮ ಕೈಗೊಂಡಿದೆ ಎಂದು ಗ್ರಾಹಕ ವ್ಯವಹಾರಗಳ ಇಲಾಖೆ ಮಾಹಿತಿ ನೀಡಿದೆ. ದೇಶದಲ್ಲಿ ಪ್ರಸ್ತುತ ೨೧ ಕೋಟಿಗೂ ಹೆಚ್ಚು ದ್ವಿಚಕ್ರ ವಾಹನಗಳಿವೆ. ಸವಾರರ ಸುರಕ್ಷತೆಯು ಅತ್ಯಂತ ಮುಖ್ಯವಾಗಿದೆ. ೧೯೮೮ ರ ಮೋಟಾರು ವಾಹನ ಕಾಯ್ದೆಯ ಪ್ರಕಾರ, ದೇಶದಲ್ಲಿ ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಧರಿಸುವುದು ಕಡ್ಡಾಯವಾಗಿದೆ.

**<><*<><>*><>**

ಅಮರನಾಥ ಯಾತ್ರೆಯ ಪಹಲ್ಗಾಮ್‌ನ ರಾಂಬನ್‌ನ ಚಂದರ್‌ಕೋಟ್ ಪ್ರದೇಶದಲ್ಲಿ, ವಾಹನವೊಂದು ನಿಯಂತ್ರಣ ತಪ್ಪಿ, ಇತರೆ ವಾಹನಗಳಿಗೆ ಡಿಕ್ಕಿ ಹೊಡೆದಿದೆ. ಇದರಿಂದ ನಾಲ್ಕು ವಾಹನಗಳಿಗೆ ಹಾನಿಯಾಗಿದ್ದು, ೩೬ ಯಾತ್ರಿಕರಿಗೆ ಸಣ್ಣ-ಪುಟ್ಟ ಗಾಯಗಳಾಗಿವೆ. ಜಿಲ್ಲಾಡಳಿತವು ಗಾಯಾಳುಗಳನ್ನು ಚಿಕಿತ್ಸೆಗಾಗಿ ರಾಂಬನ್‌ನ ಜಿಲ್ಲಾಸ್ಪತ್ರೆಗೆ ತಕ್ಷಣವೇ ಸ್ಥಳಾಂತರಿಸಿತು. ನಂತರ ಯಾತ್ರಿಕರನ್ನು ಸುರಕ್ಷಿತವಾಗಿ ಪ್ರಯಾಣ ಮುಂದುವರಿಸಲು ಇತರೆ ವಾಹನಗಳಿಗೆ ಸ್ಥಳಾಂತರಿಸಲಾಯಿತು.

**<><*<><>*><>**

ಬೀಜಿಂಗ್‌ನಲ್ಲಿ ನಡೆದ ಪ್ಯಾರಾ-ಆರ್ಚರಿ ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ, ಭಾರತೀಯ ಬಿಲ್ಲುಗಾರರು ಇಂದು ಎರಡು ಚಿನ್ನದ ಪದಕ ಗೆದ್ದಿದ್ದಾರೆ. ಈ ಮೂಲಕ ಒಟ್ಟು ಪದಕಗಳ ಸಂಖ್ಯೆ ಏಳಕ್ಕೆ ಏರಿಕೆಯಾಗಿದೆ. ಶೀತಲ್ ದೇವಿ ಮತ್ತು ಜ್ಯೋತಿ ಅವರನ್ನೊಳಗೊಂಡ ಮಹಿಳಾ ಸಂಯುಕ್ತ ತಂಡವು, ಚೀನಾವನ್ನು ೧೪೮-೧೪೩ ಅಂತರದಿಂದ ಸೋಲಿಸಿ ಚಿನ್ನದ ಪದಕ ಗೆದ್ದಿತು. ಮಿಶ್ರ ರಿಕರ್ವ್ ವಿಭಾಗದಲ್ಲಿ ಹರ್ವಿಂದರ್ ಸಿಂಗ್ ಮತ್ತು ಭಾವನಾ, ಚಿನ್ನ ಗೆದ್ದರು. ಪುರುಷರ ರಿಕರ್ವ್ ಓಪನ್, ಪುರುಷರ ಕಾಂಪೌಂಡ್ ಓಪನ್ ಮತ್ತು ಮಿಶ್ರ ಸಂಯುಕ್ತ ಓಪನ್ ವಿಭಾಗಗಳಲ್ಲಿ, ಭಾರತ ಮೂರು ಬೆಳ್ಳಿ ಪದಕಗಳನ್ನು ತನ್ನದಾಗಿಸಿಕೊಂಡಿದೆ.

<><*<><>*><>

ಸ್ಕ್ವಾಶ್ ಕ್ರೀಡೆಯಲ್ಲಿ ಭಾರತ ಮತ್ತೊಂದು ಐತಿಹಾಸಿಕ ಸಾಧನೆ ದಾಖಲಿಸಿದೆ. ಏಷ್ಯನ್ ಕಿರಿಯರ ಸ್ಕ್ವಾಶ್ ಚಾಂಪಿಯನ್‌ಶಿಪ್‌ನಲ್ಲಿನ ೧೭ ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಆರ್ಯವೀರ ದೇವನ್, ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಅವರು, ಮಲೇಶಿಯಾದ ನಿಖಿಲೇಶ್ವರ್ ಮೊಗನಸುಂಧರಂ ವಿರುದ್ಧ ನೇರ ಸೆಟ್‌ಗಳಲ್ಲಿ ಗೆಲುವು ಸಾಧಿಸಿ, ಈ ವಿಭಾಗದಲ್ಲಿ ಭಾರತಕ್ಕಾಗಿ ೧೩ ವರ್ಷಗಳ ನಿರೀಕ್ಷೆಗೆ ತೆರೆ ಎಳೆದರು. ಅಂತಿಮ ಪಂದ್ಯದಲ್ಲಿ ಆರ್ಯವೀರ ೧೧-೫, ೧೧-೮, ೧೧-೩ ಅಂಕಗಳೊಂದಿಗೆ ಗೆಲುವು ಸಾಧಿಸಿದರು. ೧೯ ವರ್ಷದೊಳಗಿನ ವಿಭಾಗದಲ್ಲಿ ಭಾರತದ ಅನಹತ್ ಸಿಂಗ್, ಅದ್ಭುತ ಪ್ರದರ್ಶನದೊಂದಿಗೆ ಚಾಂಪಿಯನ್ ಪಟ್ಟವನ್ನು ತಮ್ಮದಾಗಿಸಿಕೊಂಡರು. ಅವರು, ಹಾಂಗ್‌ಕಾಂಗ್ ಚೈನಾದ ಚೆಂಗ್ ಟಿಸಿ ವಿರುದ್ಧ ೩-೦ ನೇರ ಸೆಟ್‌ಗಳಲ್ಲಿ ಜಯಗಳಿಸಿದರು. ೧೬ ವರ್ಷದ ಅನಹತ್ ೧೧-೭, ೧೧-೨, ೧೧-೮ ಅಂಕಗಳೊಂದಿಗೆ ಚಿನ್ನದ ಪದಕ ಗೆದ್ದರು.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<>ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>